**SL. No. : EE**

ಒಟ್ಟು ಪ್ರಶ್ನೆಗಳ ಸಂಖ್ಯೆ : 45 ]

Total No. of Questions : 45 ]

**CCE RR**
**UN-REVISED**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8

[ Total No. of Printed Pages : 8

**ಸಂಕೇತ ಸಂಖ್ಯೆ : 33-K**

**Code No. : 33-K**

# ವಿಷಯ : ದ್ವಿತೀಯ ಭಾಷೆ — ಕನ್ನಡ

# Subject : Second Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

ದಿನಾಂಕ : 28. 03. 2018 ] [ Date : 28. 03. 2018

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-00 ರವರೆಗೆ ] [ Time : 9-30 A.M. to 12-00 Noon

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 45 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**Tear here**

## ವಿಭಾಗ – 'ಎ'

### ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೋಷಕ ಅಧ್ಯಯನ)

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ :** $8 \times 1 = 8$

1. ಗಿಳಿಯ ಯಾವ ಗುಣವನ್ನು ಇಂದ್ರನು ಮೆಚ್ಚಿಕೊಂಡನು ?
2. ರಾಹುಲರ ಹೆಸರಿಗೆ ದ್ರಾವಿಡ್ ಎಂಬುದು ಸೇರಿದ್ದು ಹೇಗೆ ?
3. ಕಲಿಕೆಗೆ ಮುಖ್ಯವಾಗಿ ಇರಬೇಕಾದುದು ಯಾವುದು ?
4. ಸಾಧಕ ಶಿಷ್ಯರ ಬಗೆಗಿರುವ ರಾಮನ್‌ರ ದೊಡ್ಡ ಗುಣ ಯಾವುದು ?
5. ಯೋಗಿಯ ಸಾಧನೆಯನ್ನು ಮೀರಿದ್ದು ಯಾವುದು ?
6. ಸೂರ್ಯ ಚಂದ್ರರಿಗಿಂತಲೂ ಬಾಹುಬಲಿಯು ಶ್ರೇಷ್ಠನು ಹೇಗೆ ?
7. ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು ?
8. ಉತ್ತರನು ನಿಟ್ಟೋಟದಲ್ಲಿ ಓಡಿದ್ದು ಏಕೆ ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** $11 \times 2 = 22$

9. ಮರವನ್ನು ಬಿಟ್ಟುಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಏನಾಗಿತ್ತು ?
10. ರಾಹುಲ್ ದ್ರಾವಿಡರನ್ನು 'ಗೋಡೆ' ಎಂದು ಕರೆಯಲು ಕಾರಣವೇನು ?
11. ಪಶ್ಚಿಮ ಘಟ್ಟಗಳನ್ನು ಅತಿಯಾಗಿ ದೋಚಿದುದರ ಪರಿಣಾಮವೇನು ?
12. ಪ್ರಕೃತಿಯು ಮಾನವನಿಗೆ ತನ್ನ ಪ್ರತಿಭಟನೆಯನ್ನು ಹೇಗೆ ತೋರಿದೆ ?
13. ರಾಮನ್‌ರು ಶಿಷ್ಯರ ಸೆಮಿನಾರುಗಳನ್ನು ಏಕೆ ತಪ್ಪಿಸಿಕೊಳ್ಳುತ್ತಿರಲಿಲ್ಲ ?
14. ಬಾಹುಬಲಿಯೂ ಮಗುವೂ ಒಂದೇ ಹೇಗೆ ?
15. ಕವಿ ಸಿ.ಪಿ.ಕೆ.ಯವರು ಪ್ರತಿಯೊಬ್ಬನೂ ತನ್ನದಾದ ಕರ್ತವ್ಯವನ್ನು ಹೇಗೆ ಮಾಡಬೇಕೆನ್ನುತ್ತಾರೆ ?
16. ಅಪ್ಪಯ್ಯನಿಗೆ ಮಕ್ಕಳು ಹೇಗೆ ಹೆಸರು ತರುತ್ತಾರೆ ?
17. ಬಸವಣ್ಣನವರು ಕುರುಡು ಸಂಪ್ರದಾಯವನ್ನು ಹೇಗೆ ಲೇವಡಿ ಮಾಡಿದ್ದಾರೆ ?
18. ಕುರ್ಚಿಯ ಬಗ್ಗೆ ಜೋಯಿಸರ ಹೆಂಡತಿಗೆ ಇರುವ ಭಾವನಾತ್ಮಕ ಸಂಬಂಧ ಎಂತಹುದು ?
19. 'ಯಾರೇನು ಅಂದಿಲ್ಲ, ಒಳ್ಳೆಯವರಿವರೆಲ್ಲ' ಸಾವಿತ್ರಿಯ ಈ ಹಿಗ್ಗಿಗೆ ಕಾರಣವೇನು ?

20. **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** 1 × 3 = 3

ಕೊರಡ ಕೊನರಿಸಿ ....................................................

..........................................................................

..........................................................................

................................................ ಕಲರವಕೆ ಮತ್ತೇರಿದೆ.

***ಅಥವಾ***

ಯುಗದ ಹಿಂದಿನ ....................................................

..........................................................................

..........................................................................

................................................ ತುಂಬ ಸವಿಚೈತ್ರವು.

**ಈ ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** 2 × 3 = 6

21. ಕುವೆಂಪು

22. ಗದುಗಿನ ನಾರಣಪ್ಪ (ಕುಮಾರವ್ಯಾಸ)

**ಈ ಕಳಗಿನ ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ :** 2 × 3 = 6

23. ಕುರುಡರಾಗಿದ್ದರೂ ಕಣ್ಣಿದ್ದವರ ಕಣ್ಣು ತೆರೆಯಿಸಿದ ಮಹಾಶಕ್ತಿ.

24. ನನ್ನ ಇರುವಿಕೆಯ ಅರಿವಾಗುತ್ತದೆ

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 2 × 4 = 8

25. ಅಜ್ಜನು ಸಾಹೇಬರ ಮನೆಗೆ ಹೋಗಬೇಕಾಗಿ ಬಂದ ಘಟನೆಯನ್ನು ವಿವರಿಸಿ.

***ಅಥವಾ***

ಪ್ರಾಮಾಣಿಕ ಶಿಕ್ಷಕನಿಗೆ ದೊರೆತ ಗೌರವವು ನೊಬೆಲಿಗೆ ಸಮಾನ ಎನಿಸಿದ್ದು ಹೇಗೆ ? ವಿವರಿಸಿ.

26. 'ಗುರಿ' ಪದ್ಯದ ಸಾರಾಂಶವನ್ನು ಕವಿಯ ಆಶಯದೊಂದಿಗೆ ವಿವರಿಸಿ.

***ಅಥವಾ***

ಗೋಪಾಲಕೃಷ್ಣ ಅಡಿಗರು ಹೇಳಿರುವಂತೆ ಜೀವನ ಸಾರ್ಥಕ್ಯಕ್ಕಾಗಿ ಕೈಗೊಳ್ಳಬೇಕಾದ ಕಾರ್ಯಗಳಾವುವು ? ವಿವರಿಸಿ.

## ವಿಭಾಗ – 'ಬಿ'

### (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** 12 × 1 = 12

27. 'ವೀರೇಶ್ವರ' ಪದದಲ್ಲಿ ಏರ್ಪಟ್ಟಿರುವ ಸಂಧಿ

(ಎ) ಸವರ್ಣದೀರ್ಘ ಸಂಧಿ (ಬಿ) ಗುಣ ಸಂಧಿ

(ಸಿ) ಯಣ್ ಸಂಧಿ (ಡಿ) ವೃದ್ಧಿ ಸಂಧಿ

28. 'ಎಚ್ಚರ' ಎಂಬ ಅರ್ಥಕೊಡುವ ಪದ

(ಎ) ಜಾಗೃತಿ (ಬಿ) ವಿಹಾರಿ

(ಸಿ) ಚೇತನ (ಡಿ) ಭಾಜನ

29. 'ತದ್ಭವ' ರೂಪದಲ್ಲಿರುವ ಪದ

(ಎ) ಸಂಸ್ಕೃತ (ಬಿ) ಸ್ಥಾನ

(ಸಿ) ಬಣ್ಣನೆ (ಡಿ) ದೃಷ್ಟಿ

30. ಪೂರ್ವಪದವು ಸಂಖ್ಯಾವಾಚಿಯಾಗಿರುವ ಸಮಾಸ

(ಎ) ದ್ವಿಗು (ಬಿ) ಕ್ರಿಯಾ

(ಸಿ) ತತ್ಪುರುಷ (ಡಿ) ಅಂಶಿ

31. ಸರ್ವನಾಮಕ್ಕೆ ಉದಾಹರಣೆ ಇದು

(ಎ) ಪ್ರಸನ್ನ (ಬಿ) ವಸಂತ

(ಸಿ) ಮರ (ಡಿ) ಅವನು

32. ದ್ವಿರುಕ್ತಿಗೆ ಉದಾಹರಣೆಯಾದ ಪದ

(ಎ) ಹೊಚ್ಚ ಹೊಸದು (ಬಿ) ಸಿಹಿ–ಕಹಿ

(ಸಿ) ನಡೆನುಡಿ (ಡಿ) ರೀತಿನೀತಿ

33. ಛಂದಸ್ಸಿನಲ್ಲಿ ಗಣ ವಿಂಗಡಿಸಲು ಗುರು–ಲಘುಗಳನ್ನು ಗುರುತಿಸುವುದಕ್ಕೆ ಹೀಗೆನ್ನುವರು.

(ಎ) ಪ್ರಾಸ (ಬಿ) ಕಂದ

(ಸಿ) ಮಾತ್ರೆ (ಡಿ) ಪ್ರಸ್ತಾರ

34. ಗ್ರಾಂಥಿಕ ರೂಪದಲ್ಲಿರುವ ಪದ

(ಎ) ಏತಕ್ಕೆ (ಬಿ) ಅತ್ತಾರೆ

(ಸಿ) ಕಂಡ್ಹಸಿವು (ಡಿ) ಚಿಗಿತಾವು

35. ಅಕ್ಷರಗಳು ಹಾಗೂ ಪದಗಳು ನಿಯಮಿತ ಸ್ಥಾನದಲ್ಲಿ ಪುನರಾವರ್ತನೆಗೊಂಡರೆ, ಅದು

(ಎ) ಉಪಮಾಲಂಕಾರ (ಬಿ) ಶಬ್ದಾಲಂಕಾರ

(ಸಿ) ದೃಷ್ಟಾಂತಾಲಂಕಾರ (ಡಿ) ರೂಪಕಾಲಂಕಾರ

36. 'ಮನೆಯಲ್ಲಿ' ಈ ಪದದ ವಿಭಕ್ತಿ

(ಎ) ಪ್ರಥಮಾ (ಬಿ) ತೃತೀಯಾ

(ಸಿ) ದ್ವಿತೀಯಾ (ಡಿ) ಸಪ್ತಮೀ

37. ಏಕವಚನದಲ್ಲಿರುವ ನಾಮಪದವಿದು

(ಎ) ಮನೆಗಳು (ಬಿ) ಪಾಲಕರು

(ಸಿ) ಮಗು (ಡಿ) ಶಿಕ್ಷಕರು

38. ವರ್ತಮಾನ ಕಾಲದಲ್ಲಿರುವ ಪದವಿದು

(ಎ) ಬರೆಯುತ್ತಾರೆ (ಬಿ) ಬರೆದನು

(ಸಿ) ಬರೆಯುವನು (ಡಿ) ಬರೆದಾನು

## ವಿಭಾಗ – 'ಸಿ'

## (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

**ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** 4 × 1 = 4

ಮಂಡಲ್ ಗ್ರಾಮದ ಸುತ್ತಮುತ್ತ ಅರಣ್ಯವಿದೆ. ಈ ಅರಣ್ಯದಿಂದ ಮರಮುಟ್ಟು ಸೌದೆ ಇತ್ಯಾದಿಗಳಿಗಾಗಿ ಮರ ಕಡಿಯುವುದನ್ನು ಸರ್ಕಾರ ನಿಷೇಧಿಸಿತ್ತು. ಆದರೆ ಅದೇ ಅರಣ್ಯದಲ್ಲಿ ಮರಗಳನ್ನು ಕಡಿಯಲು ಅಲಹಾಬಾದ್‌ನ ಆಟದ ಸಾಮಾನುಗಳ ತಯಾರಿಕನೊಬ್ಬನಿಗೆ ಅನುಮತಿ ನೀಡಿತ್ತು. ಮರ ಕಡಿಯಲು ಮಂಡಲ್ ಗ್ರಾಮಕ್ಕೆ ಸಿಬ್ಬಂದಿಯವರೊಂದಿಗೆ ಕಂಟ್ರಾಕ್ಟರ್ ಬಂದ. ಗ್ರಾಮದ ಮಹಿಳೆಯರು ಮರ ಕಡಿಯಕೂಡದೆಂದು ಕೇಳಿಕೊಂಡರು. ಆದರೆ ಕಂಟ್ರಾಕ್ಟರ್ ಅದಕ್ಕೆ ಸಿದ್ಧವಿರಲಿಲ್ಲ. ಗ್ರಾಮದ ಜನತೆ ಮರಗಳನ್ನು ರಕ್ಷಿಸಲು ನಿರ್ಧರಿಸಿದರು. ಜನ ಮುಂದೆ ಬಂದು ಕಡಿಯಬೇಕೆಂದು ಗುರುತು ಮಾಡಿದ್ದ ಮರಗಳನ್ನು ಅಪ್ಪಿಕೊಂಡರು. ಮರಗಳನ್ನು ಕಡಿಯಬೇಕಾದರೆ ಅದಕ್ಕಿಂತ ಮುಂಚೆ ನಮ್ಮನ್ನು ಕತ್ತರಿಸಿ ಎಂದರು.

*ಪ್ರಶ್ನೆಗಳು :*

39. ಮರ ಕಡಿಯುವ ಮುನ್ನ ಜನ ಏನೆಂದು ಹೇಳಿದರು ?

40. ಸರ್ಕಾರದ ನಿಷೇಧ ಏನಾಗಿತ್ತು ?

41. ಸರ್ಕಾರ ಮರ ಕಡಿಯಲು ಯಾರಿಗೆ ಅನುಮತಿ ನೀಡಿತ್ತು ?

42. ಮರ ಕಡಿಯಲು ಬಂದಾಗ ಗ್ರಾಮದ ಜನರು ಏನು ಮಾಡಿದರು ?

43. **ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ :** 1 × 3 = 3

* ಆಳಾಗಿ ದುಡಿಯಬಲ್ಲವ; ಅರಸನಾಗಿ ಆಳಬಲ್ಲ
* ಬೆಳೆಯುವ ಸಿರಿ ಮೊಳಕೆಯಲ್ಲಿ
* ಕೈಕೆಸರಾದರೆ ಬಾಯಿ ಮೊಸರು

44. ನಿಮ್ಮನ್ನು ಧಾರವಾಡದ ವಾಣಿ ಪ್ರೌಢಶಾಲೆಯ 'ಮೋಹನ್' ಎಂದು ಭಾವಿಸಿಕೊಂಡು, ಪ್ರವಾಸಕ್ಕೆ ಹೋಗಲು ಅನುಮತಿಯನ್ನು ಕೋರಿ ಬೆಂಗಳೂರಿನಲ್ಲಿ ವಾಸವಾಗಿರುವ 'ನಟರಾಜ' ಎಂಬ ಹೆಸರಿನ ತಂದೆಯವರಿಗೆ ಪತ್ರವೊಂದನ್ನು ಬರೆಯಿರಿ. 1 × 4 = 4

***ಅಥವಾ***

ನಿಮ್ಮನ್ನು ಬಳ್ಳಾರಿಯ 'ರಿಜ್ವಾನ್' ಎಂದು ಭಾವಿಸಿಕೊಂಡು, ನಿಮ್ಮ ಬಡಾವಣೆಯ ಬೀದಿದೀಪಗಳನ್ನು ಸರಿಪಡಿಸಲು 'ನಗರಪಾಲಿಕೆಯ ಆಯುಕ್ತರಿ'ಗೊಂದು ಮನವಿ ಪತ್ರ ಬರೆಯಿರಿ.

45. **ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ :** 1 × 4 = 4

∗ ಶಾಲೆಗಳಲ್ಲಿ ಗ್ರಂಥಾಲಯಗಳ ಪ್ರಾಮುಖ್ಯತೆ

∗ ದೂರದರ್ಶನದಿಂದಾಗುವ ಉಪಯೋಗಗಳು

∗ ಪರಿಸರ ಸ್ವಚ್ಛತೆಯಲ್ಲಿ ವಿದ್ಯಾರ್ಥಿಗಳ ಪಾತ್ರ